ಅಧ್ಯಕ್ಷರು.—ನಾನು ಏತಕ್ಕೆ ಹೇಳಬೇಕು ? ನಾನು ಸರ್ಕಾರಿ ಮಂತ್ರಿಯಲ್ಲ, ನಾನು ಈ ಮನೆಯ ಸ್ಪೀಕರ್.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನ ತಾಲ್ಲೂಕಿನಲ್ಲಿ ಬೇಗೂರು ಹಳ್ಳಿಯಲ್ಲಿ ಬಿಲ್ಡಿಂಗ್ ಕಟ್ಟಿ ಅವು ರೆಡಿಯಾಗಿ ಮೂರು ವರ್ಷಗಳಾಗಿವೆ. ಆ ಬಿಲ್ಡಿಂಗ್ ಹಾಳಾಗುತ್ತಿವೆ. ಅಲ್ಲಿ ಸಿಬ್ಬಂದಿಯನ್ನು ಪೋಸ್ಟಿಂಗ್ ಮಾಡುವುದಕ್ಕೆ ಸಾಧ್ಯವೆ ಅದನ್ನು ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.—ಮಾಡಿಕೊಡುತ್ತೇನೆ.

ಗಂಧದ ಮರಗಳ ಕಳ್ಳ ಸಾಗಾಣಿಕೆ

೨೨೪. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇದುವರೆವಿಗೆ ಎಷ್ಟು ಗಂಧದ ಮರಗಳ ಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ?

ಆ) ಈ ಬಗ್ಗೆ ಹಿಡಿಯಲಾದ ಗಂಧದ ಮರದ ಹಣದ ಮೌತ್ತವೆಷ್ಟು ?

ಇ) ಗಂಧದ ಮರಗಳನ್ನು ಉಪಯೋಗಿಸಲು ಎಷ್ಟು ಜನರಿಗೆ ಪರವಾನಿಗೆ ನೀಡಲಾಗಿದೆ ?

ಶ್ರೀ ಜೆ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೧೯೮೩-೮೪ ರಿಂದ ೧೯೮೬-೮೭ (ಡಿಸೆಂಬರ್ ೧೯೮೬ ವರಗಿನ) ಗಂಧದ ಮರ ಸಾಗಾಣಿಕೆ ಪ್ರಕರಣಗಳ ವಿವರ ಈ ಕೆಳಗಿನಂತಿದೆ.—

೧೯೮೩-೮೪	೩೮೭
೧೯೮೪-೮೫	೩೮೨
೧೯೮೫-೮೬	೫೭೨
೧೯೮೬-೮೭	೪೪೫
(೩೧-೧೨-೧೯೮೬ರ ವರೆಗೆ)	

ಆ) ಹಿಡಿಯಲಾದ ಗಂಧದ ಮರದ ಹಣದ ಮೌತ್ತ ಈ ಕೆಳಗಿನಂತಿದೆ.—

೧೯೮೩-೮೪	೪೪,೮೬,೬೯೫-೦೦
೧೯೮೪-೮೫	೪೩,೬೧,೨೧೨-೦೦
೧೯೮೫-೮೬	೬೯,೭೭,೭೭೯-೦೦
೧೯೮೬-೮೭	೧,೦೪,೫೫,೫೫೪-೦೦
(೩೧-೧೨-೧೯೮೬ರ)	ಡಿಸೆಂಬರ್ ಅಂತ್ಯದವರೆಗೆ)

ಇ) ಗಂಧದ ಮರಗಳನ್ನು ಉಪಯೋಗಿಸಲು ಪರವಾನಿಗೆ ಕೊಟ್ಟಿಲ್ಲ.

ಗಂಧದ ಮರಗಳನ್ನು ಸ್ವಾಧೀನ ಪಡಿಸಿಕೊಂಡಿರುವುದು

೫೩೬. ಶ್ರೀ ಐ. ಬಿ. ಶಂಕರ್, (ಚಿಕ್ಕ ಮಂಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕ ಮಗಳೂರು ಅರಣ್ಯ ವಿಭಾಗದ ಸ್ಕ್ವಾಡ್‌ನವರು ಇದುವರೆಗೂ ಹಿಡಿದಿರುವ ಕಳ್ಳ ಸಾಗಾಣಿಕೆಯ ಗಂಧದ ಮರದ ಪ್ರಮಾಣ ಎಷ್ಟು ?

ಆ) ಅರಣ್ಯ ಇಲಾಖೆಯಲ್ಲಿನ ಅಧಿಕಾರಿಗೆ ಅವರ ಉತ್ತಮ ಸೇವೆಗೆ ಬಹುಮಾನ ನೀಡಲಾಗುವುದೆಂದು ಪ್ರಕಟಿಸಿರುವುದು ನಿಜವಲ್ಲವೇ ?